## ತುಪ್ಪದ ದೀಪ

ಮಂಜುನಾಥ ತನ್ನ ಹೆಂಡತಿಯನ್ನು, 'ಏನೇ, ಒಂದು ವಾರದಿಂದ ನೋಡ್ತಾ ಇದ್ದೀನಿ. ಬೆಳಗ್ಗೆ, ಸಂಜೆ ಎರಡೂ ಹೊತ್ತು ತುಪ್ಪದ ದೀಪ ಹಚ್ತಾ ಇದ್ದೀಯಲ್ಲ, ಏನು ವಿಶೇಷ?' ಎಂದು ಕೇಳಿದ. ಅದಕ್ಕೆ ಅವಳು, 'ತುಪ್ಪದ ದೀಪ ಹೆಚ್ಚುವುದಕ್ಕೆ ವಿಶೇಷ ಯಾಕ್ರೀ ಬೇಕು? ಭಕ್ತಿ ಇದ್ರೆ ಸಾಕು' ಎಂದಳು. ಅಷ್ಟರಲ್ಲಿ ಅಲ್ಲಿಯೇ ಇದ್ದ ಮಗ, 'ಏನಿಲ್ಲ ಅಪ್ಪ, ತುಪ್ಪದ ಡಬ್ಬದಲ್ಲಿ ಜಿರಲೆ ಬಿದ್ದಿತ್ತು...' ಎಂದ!

**ಶಂಕರೇಗೌಡ ತುಂಬಕೆರೆ**





## ಸಾರಿಗೆ ಬಸ್ಸು

ರಮೇಶ ಬೆಳಗ್ಗೆ ಎದ್ದು ಪೇಪರ್ ಓದುತ್ತ ಕೂತಿದ್ದ. 'ಲೇ... ಇವಳೇ, ಇಲ್ನೋಡೆ, ನಿಮ್ಮೂರಿನ ಹತ್ತಿರ ಎಂಥಾ ಘಟನೆ ನಡೆದಿದೆ... ಸಾರಿಗೆ ಬಸ್ಸು ಉರುಳಿ ಬಿದ್ದು ಐದು ಜನ ಸತ್ತಿದ್ದಾರಂತೆ, ಪಾಪ' ಎಂದ. ಅಡುಗೆಮನೆಯಲ್ಲಿ ಸಾರಿಗೆ ಉಪ್ಪು ಸೇರಿಸುತ್ತಿದ್ದ ಪತ್ನಿ ರಾಧಾ, 'ಅಯ್ಯೊ, ಅಷ್ಟು ದೊಡ್ಡ ಬಸ್ಸು ಸಾರಿಗೆ ಉರುಳಿ ಬೀಳಬೇಕು ಅಂದ್ರೆ ಸಾರಿನ ಪಾತ್ರೆ ಎಷ್ಟು ದೊಡ್ಡದಿರಬಹುದು! ಅಲ್ವೇನ್ರಿ?' ಅಂದಳು.

**ಕಾವ್ಯಾ ಹಿರೇಮಠ**